ಫ್ರೆಂಚ್‌ರಾಕ್ಸ್ ಸಬ್ ಡಿವಿಜ಼ನ್ ಆಫೀಸಿನಿಂದ.

ತಾರೀಖು 15ನೇ ಜುಲೈ 1889.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫ್ರೆಂಚ್‌ರಾಕ್ಸ್ ಸಬ್ ಡಿವಿಜ಼ನ್ ಮಳವಳ್ಳೀ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕುದಾರೀ ಮಳವಳ್ಳೀ ತಾಲ್ಲೂಕು ಕಚ್ಚೇರಿಯಲ್ಲಿ, ನಂ 1889ನೇ ಇಸವಿ ಆಗಸ್ಟು ತಾರೀಖು 17ನೇ ದಿವಿ 11 ಘಂಟೆಗೆ ಪ್ರಾರಂಭೀಸಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

2. ಅಮಲ್‌ದಾರು ಅಥವಾ ಶರಸ್ತೇದಾರು ಹರಾಜು ಮಾಡಿಸುವರು.

3. ಈ ಹರಾಜಿನ ಚಡದರಖಾಸ್ತು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರಿಂದ ಮಂಜೂರ್ಮಾಡುವ ಪರಿಯಂತರ ಕಾಯಂ ಆದ್ದಾಗಿ ತಿಳಿದುಕೊಳ್ಳಕೂಡದು.

4. ಈ ಇಜಾರೆಯು 1890ನೇ ಇಸವಿ ಮಾರ್ಚಿ ತಾರೀಖು 31ರ ವರಿವಿಗೆ ಜಾರಿಯಲ್ಲಿ ಯಿರತಕ್ಕದ್ದು.

5. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ವೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಡಿಪಾಜಿಟ್ ಯಿಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಸಬ್ ಡಿವಿಜ಼ನ್ ಆಫೀಸರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲ್ 7 ದಿವಸದ ಒಳಗಾಗಿ ಕ್ರಯದ ಒಟ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಯಂತೆ ಆಗುವ ಲೋಕಲ್‌ನೆಸ್ ದೇಖೀಲ್ ಬಾಕೀ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಯಿಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು, ಹಾಂಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡದಿದ್ದರೂ ಅಥವಾ ಬಾಕೀ ಕ್ರಯದ ಮೊಬಲಗು ಪಾವತಿ ಮಾಡದಿದ್ದರೂ ಹಕ್ಕುದಾರಿಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ಲುಕ್‌ಸಾನಿಗೂ ವಳಪಟ್ಟು ಪುನಹಾ ವಿಕ್ರಯಿಸಲ್ಪಡುವದು.

6. ಹರಾಜು ಷರತ್ತುಗಳು.

1. ಹಿಡವಳೀ ಜಮೀನಿನಲ್ಲಿ ಯಿರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡವಳೀದಾರನ ಸಮ್ಮತಿಯನ್ನು ಪಡೆಯಬೇಕು ಜಮೀನ ಹಿಡುವಳೀದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೂಡದು. ಇಜಾರ್‌ದಾರನಿಗೆ ಮೊರಬೇಕೇ ಹೊರ್ತು ಇತರ ಜನಗಳಿಗೆ ಮಾರಲೂ ಕೂಡದು.

2. ಇಜಾರೇದಾರನು ಹುಲ್ಲುಬನ್ನೀ ಇಜಾರೇದಾರರ ಚರಾವ್ಹೆ ಜಕ್ಕನಲ್ಲಿ ಪ್ರವೇಶಿಸಕೂಡದು.

3. ಬಂಜರ್ ಜಮೀನ್‌ಗಳು ಸಾಗುವಳೀ ಬಗ್ಗೆ ಪರಭಾರ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟು ಬಿಡುವದಕ್ಕೆ ಕುರಂಗದ ಇಜಾರ್‌ದಾರನು ಅಡ್ಡೀ ಹೇಳಕೂಡದು, ಅಂಥಾ ಜಮೀನ್‌ಗಳಲ್ಲಿ ಕುರಂಗದ ಕಲ್ಲುಗಳನ್ನು ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಇಜಾರ್‌ದಾರನಿಗೆ ವುಳಿದು ಯಿರುತ್ತೆ.

4. ಇಜಾರ್‌ದಾರನು ಕಲ್ಲುಗಣಿಗೋಸ್ಕರ ಜಮೀನ್‌ಗಳನ್ನು ಅಗಿಯಲೂ ಕೂಡದು ಒಂದು ವೇಳೆ ಹಾಂಗೆ ಆಗದಲ್ಲಿ ಆಗುಂಡಿಗಳನ್ನು ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮೀನ್ ಲಾಯಕ್ಕು ಯಿರುವಹಾಗೆ ಮಾಡಬೇಕು.

ತಾರೀಖು 15ನೇ ಜುಲೈ 1889.

ಇದರಿಂದ ತಿಳಿಯಪಡಿಸುವದೇನಂದರೆ, ಫ್ರೆಂಚ್‌ರಾಕ್ಸ್ ಸಬ್ ಡಿವಿಜನಿಗೆ ಕೇರಿದ ಮಂಡ್ಯದ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಯರಡು ವರುಷಗಳ ಅಧಿಕ ಕಾಲದಿಂದ ಕೀಪಾರಸಾಗಿ ನಿಂತಿರುವ ಇದರಡಿಕಂಡ ದಸ್ತಾವೇಜನ್ನು ದಾಖಲ್ಮಾಡಿದವರೇ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಪಡೆದ ಪ್ರತಿನಿಧಿಗಳೇ ಆಗಲಿ ಈ ಇಸ್ತಿಹಾರ್ ತಾರೀಖು ಲಾಗಾಯತು ಒಂದು ತಿಂಗಳೊಳಗೆ ಮಂಡ್ಯದ ಸಬ್ ರೆಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ವಾಪಸ್ ಪಡೆಯಬೇಕು, ಇದಕ್ಕೆ ತಪ್ಪಿದರೆ 1877ನೇ ಇಸವಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರು.	ದಸ್ತಾವೇಜಿನ ತಾರೀಖು.	ದಸ್ತಾವೇಜು ರಿಜಿಸ್ಟರು ಪಡಿದ ತಾರೀಖು.	ದಸ್ತಾವೇಜು ರಿಜಿಸ್ಟರು ಆದ ತಾರೀಖು.	ದಸ್ತಾವೇಜನ್ನು ಬರೆದುಕೊಟ್ಟವನ ಹೆಸರು.	ದಸ್ತಾವೇಜನ್ನು ಬರೆಸಿಕೊಂಡವನ ಹೆಸರು.	ದಸ್ತಾವೇಜಿನ ಸ್ವಭಾವ.	ಷರಾ.
262 86—87	31—1—87	4—2—87	4—2—87	ಆತಗೂರು ಹೋಬ್ಳಿ ಹೆಬ್ಬಳಲಲ್ಲಿರುವ ಚನ್ನೆ ದೊಡ್ಡಂಕನಹಳ್ಳಿ ವಪ್ಪನವರ ಮಗ ಕಾನು ಕ್ಕ ಲಿಗರ ಬೆಟ್ಟ ವರ ಭೋಗ ನಂಜಪ್ಪ. ಪ್ಪ ಬೆಟ್ಟೆ.		ತನ್ನ ಜಮೀನು ಮತ್ತು ಮನೆ ಸಹ 150 ರೂಪಾಯಿಗೆ ಆಧಾರ ವಾಡಿಧ ಈ ಮೊಬಲಗ್ಯೆ ಕೇಕಡಾ ಮಾಹಯಾನಾ ಪಂದು ರೂಪಾಯಿನ ಮೇರಿಗೆ ಬಡ್ಡಿ ಅಸಲು ಸಹಾ ಒಂದು ವರುಷದಲ್ಲಿ ಪಾವತಿ ಮಾಡುವ ಹಾಗೆ.	

ಬಿ. ತಿರುಮಲಾಚಾರ್,
ಫ್ರೆಂಚ್‌ರಾಕ್ಸ್ ಸಬ್ ಡಿವಿಜ಼ನ್ ಆಫೀಸರ್.